ನಿಲಯಗಳಿಗೂ ಮತ್ತು ಸರ್ಕಾರಿ ವಿದ್ಯಾರ್ಥಿನಿಲಯಗಳಿಗೂ ಕೊಡತಕ್ಕಂಥ ಗ್ರಾಂಟ್‌ನಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಒಬ್ಬ ವಿದ್ಯಾರ್ಥಿಗೆ ೧೦೦ ರೂಪಾಯಿ ಗ್ರಾಂಟ್ ಕೊಡುತ್ತಿರುವಂತೆ ಖಾಸಗಿಯವರಿಗೂ ಕೊಡುತ್ತಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಪ್ರಸಾದ ನಿಲಯಗಳಿಗೆ ಕೊಡುತ್ತಿರತಕ್ಕಂಥ ಗ್ರಾಂಟು ಸಾಲುವುದಿಲ್ಲವೆನ್ನುವ ಬೇಡಿಕೆ ಇರುತ್ತದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಇದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರ ಅದನ್ನು ಪುನರ್ ವಿಮರ್ಶಿಸುವ ಆಲೋಚನೆಯಲ್ಲಿದೆ.

ಹತ್ತಿ ಕೈ ಮಗ್ಗ ನೇಕಾರರ ಸಹಕಾರಿ ಸಂಘದ ಆರ್ಥಿಕ ಪರಿಸ್ಥಿತಿ

೬೮೬. ಕೆ.ಬಿ. ಕೋಳಿವಾಡ, (ರಾಣೆಬೆನ್ನೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಕರ್ನಾಟಕ ರಾಜ್ಯ ಹತ್ತಿ ಕೈ ಮಗ್ಗ ನೇಕಾರರ ಸಹಕಾರಿ ಸಂಘವನ್ನು ವಶಕ್ಕೆ ತೆಗೆದುಕೊಂಡಾಗ ಸದರಿ ಸಂಘದ ಆರ್ಥಿಕ ಪರಿಸ್ಥಿತಿ ಹೇಗಿತ್ತು ಮತ್ತು ಆ ವರ್ಷ ಎಷ್ಟು ಲಾಭ ಗಳಿಸಿತ್ತು?

ಆ) ಸದರಿ ಸಂಘವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತಹ ಬಲವಾದ ಕಾರಣಗಳಾವುವು?

ಇ) ಸದರಿ ಸಂಘವನ್ನು ಸರ್ಕಾರದ ಆಡಳಿತಾಧಿಕಾರಿ ವಶಕ್ಕೆ ಬಂದಾಗಿನಿಂದ ಪ್ರತಿ ವರ್ಷದ ಲಾಭವೆಷ್ಟು?

ಈ) ಸಂಘವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾಗ ಸಂಘದ ಮಾರಾಟ ಮಳಿಗೆಗಳೆಷ್ಟು ಇದ್ದುವು? ಈಗ ಎಷ್ಟು ಮಳಿಗೆಗಳಿವೆ?

ಉ) ಸದರಿ ಸಂಘದಲ್ಲಿರುವ ಸೈಜಿಂಗ್ ಪ್ಲಾಂಟ್ ಬಂದ್ ಮಾಡಲು ಕಾರಣಗಳೇನು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಸಂಘದ ಆರ್ಥಿಕ ಪರಿಸ್ಥಿತಿ ಸಮಾಧಾನಕರವಾಗಿರಲಿಲ್ಲ. ಈ ಸಂಘವನ್ನು ೧೯೮೪ನೇ ಡಿಸೆಂಬರ್ ಮಾಹೆಯಲ್ಲಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಆ ವರ್ಷ ಸಂಘವು ಲಾಭ ಗಳಿಸಿರುವುದಿಲ್ಲ.

ಆ) ಸಂಘದ ಆಡಳಿತ ನಿರ್ವಹಣೆ ತೀರ ಹದಗಟ್ಟಿದ್ದು, ಸಂಘದ ವ್ಯವಹಾರಗಳಲ್ಲಿನ ಲೋಪ ದೋಷಗಳನ್ನು ಆಡಿಟ್ ವರದಿ, ಭಾರತೀಯ ರಿಜರ್ವ್ ಬ್ಯಾಂಕ್ ಒಳಗೊಂಡಂತೆ ಇನ್ನೂ ಅನೇಕ ತನಿಖಾ ವರದಿಗಳಲ್ಲಿ ಸಮೂಹಿಸಿದ್ದಾಗ್ಯೂ, ಅವುಗಳನ್ನು ಸರಿಪಡಿಸಲು, ಆಡಳಿತ ವಂಡಳಿಯು ಕ್ರಮ ತೆಗೆದುಕೊಳ್ಳದಿರುವುದು ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ ಮತ್ತು ನಿಯಮಗಳು ೧೯೬೦, ಬೈಲಾ ಉಲಂಘನೆಗಳಿಂದಾಗಿ, ಸಂಘಕ್ಕೆ ವಿಶೇಷಾಧಿಕಾರಿಗಳ ನೇಮಕ ಅನಿವಾರ್ಯವಾಯಿತು.

ಇ) ವಿಶೇಷಾಧಿಕಾರಿಗಳು ನೇಮಕಗೊಂಡ ನಂತರದ ಅವಧಿಯಲ್ಲೂ ಸಂಘವು ಲಾಭವನ್ನು ಗಳಿಸಿರುವುದಿಲ್ಲ.

ಈ) ವಿಶೇಷಾಧಿಕಾರಿಗಳು ನೇಮಕಗೊಂಡಾಗ ೭೭ ಮಾರಾಟ ಮಳಿಗೆಗಳಿದ್ದು ಈಗ ೬೪ ಮಳಿಗೆಗಳು ಮಾತ್ರ ಇರುತ್ತವೆ.

ಉ) ಸೈಜಿಂಗ್ ಪ್ಲಾಂಟ್ ಇನ್ನೂ ಕೆಲಸವನ್ನು ಪ್ರಾರಂಭ ಮಾಡದಿರುವುದರಿಂದ ಅದನ್ನು ಮುಚ್ಚುವ ಪ್ರಶ್ನೆ ಉದ್ಭವಿಸದು

ಶ್ರೀ ಕೆ. ಬಿ.ಕೋಳಿವಾಡ.—ಸನ್ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯ ಹತ್ತಿ ಕೈಮಗ್ಗ ನೇಕಾರ ಸಹಕಾರಿ ಸಂಘವನ್ನು ಸರ್ಕಾರ ೧೯೮೩-೮೪ನೇ ಸಾಲಿನಲ್ಲಿ ತನ್ನ ವಶಕ್ಕೆ ತೆಗೆದುಕೊಂಡಿತು. ೩ ವರ್ಷದಲ್ಲಿ ನಷ್ಟವಾದರೂ ಸಹಿತ ೧೯೮೨-೮೩ರಲ್ಲಿ ಸುಮಾರು ೧೮ ಲಕ್ಷ ರೂಪಾಯಿ, ೧೯೮೧-೮೨ರಲ್ಲಿ

ಸುಮಾರು ೧೭ ಲಕ್ಷ ೫೪ ಸಾವಿರ ರೂಪಾಯಿ ೧೯೮೨–೮೧ರಲ್ಲಿ ೧೨ ಲಕ್ಷ ರೂಪಾಯಿಗಳಷ್ಟು ಲಾಭವನ್ನು ಗಳಿಸಿದಂಥ ಸಂಸ್ಥೆ, ಇಂದು ಆಡಳಿತಾಧಿಕಾರಿಯವರನ್ನು ನೇಮಕ ಮಾಡಿದ ಮೇಲೆ ಪ್ರತಿವರ್ಷ ಲಾಭವನ್ನು ಗಳಿಸುವ ಬದಲಾಗಿ ಸಂಪೂರ್ಣವಾಗಿ ಪ್ರತಿವರ್ಷ ಹಾನಿಯಲ್ಲಿಯೇ ಮುಂದುವರಿಯುತ್ತಿದೆ. ಹೀಗಿದ್ದರೂ ಆಡಳಿತಾಧಿಕಾರಿಯವರನ್ನೇ ಏತಕ್ಕೆ ಮುಂದುವರಿಸುತ್ತಿದ್ದೀರಿ? ಬೈಲಾ ಉಲ್ಲಂಘನೆಯಾಗಿದೆ ಆಡಳಿತ ವರ್ಗ ಮಾಡಿದ್ದರಿಂದ ಆಡಳಿತಾಧಿಕಾರಿಯನ್ನು ನೇಮಿಸಲಾಯಿತು ಎಂದು ಹೇಳಿದ್ದೀರಿ. ಬೈಲಾ ಏನು ಇದೆ? ಏನು ಉಲ್ಲಂಘನೆ ಇದೆ ಎನ್ನುವುದು ಇಲ್ಲಿನ ಪ್ರಶ್ನೆ? ಮತ್ತೆ ಹೊಸ ಆಡಳಿತ ವ್ಯವಸ್ಥೆ ಈ ಸಂಸ್ಥೆಯನ್ನು ತನ್ನ ವಶಕ್ಕೆ ತೆಗೆದುಕೊಂಡಾಗ ಮಾತಾಟ ಮಳಿಗೆಗಳು ೭೭ ಇದ್ದವು. ಈಗ ೬೪ ಇರುತ್ತವೆ. ಈ ರೀತಿ ಕಡಿಮೆಯಾಗಲು ಕಾರಣವೇನು? ಮಂತ್ರಿ ಸೈಜಿಂಗ್ ಪ್ಲಾಂಟ್ ಇನ್ನೂ ಕೆಲಸ ಪ್ರಾರಂಭ ಮಾಡಿಲ್ಲವೆಂದು ಹೇಳಿರತಕ್ಕಂಥದ್ದು ಸಹಾ ವಿಷಾದನೀಯವಾಗಿದೆ. ಹಿಂದೆ ಇದ್ದ ಆಡಳಿತ ಮಂಡಲಿಯವರು ಈ ಕೆಲಸ ಮಾಡದೇ ಇದ್ದರೆ ಈಗ ನೇಮಕಗೊಂಡಿರುವ ಆಡಳಿತಾಧಿಕಾರಿಗಳು ಬಂದ ಮೇಲೆ ಏತಕ್ಕೆ ಪ್ರಾರಂಭ ಮಾಡಲಿಲ್ಲ ಎನ್ನುವುದು ಮಂತ್ರೋದು ಪ್ರಶ್ನೆ?

ಶ್ರೀ ಆರ್.ಎಲ್. ಜಾಲಪ್ಪ.—ಆಡಳಿತ ಮಂಡಲಿಯನ್ನು ರದ್ದು ಮಾಡಿದಂದಿನಿಂದ ಲಾಭವನ್ನು ಗಳಿಸುತ್ತಿಲ್ಲವೆಂದು ಮಂತ್ರು ಹಿಂದೆ ಇದ್ದ ಆಡಳಿತ ಮಂಡಲಿ ಲಾಭಗಳಿಸುತ್ತಿದ್ದ ವಿಚಾರವನ್ನು ಹೇಳಿದ್ದಾರೆ. ಈ ಹಿಂದಿನವರು ಗಳಿಸುತ್ತಿದ್ದುದ್ದು ನಿಜವಾದ ಲಾಭವಲ್ಲ. ಅವರು ಏನು ಮಾಡುತ್ತಿದ್ದರೆನ್ನ ಎಂದರೆ ತಮಿಳುನಾಡಿನಿಂದ ೫೦–೬೦ಪರ್ಸೆಂಟ್ ಬಟ್ಟೆಯನ್ನು ಕೊಂಡುಕೊಂಡು ಬಂದು ಅದಕ್ಕೆ ೨೫–೩೦ ಪರ್ಸೆಂಟ್ ಸೇರಿಸಿ, ಸ್ಟಾಕ್ ವ್ಯಾಲ್ಯೂ ಮಾಡುವಾಗ ೩೫ ಪರ್ಸೆಂಟ್ ಸ್ಟಾಕ್ ವಾಲ್ಯು ಮಾಡಿ ಸ್ಟಾಕು ಜಾಸ್ತಿ ಬಂದಿದೆ, ಆದ್ದರಿಂದ ಲಾಭವೂ ಕೂಡ ಜಾಸ್ತಿಯಾಗಿದೆ ಎಂದು ಹೀಗೆ ತೋರಿಸಿಕೊಂಡು ಬರುತ್ತಿದ್ದರು.

ಒಂದು ದಿವಸ ಇಬ್ಬರು ಹುಡುಗರು ನನ್ನ ಬಳ್ಳಿ ಬಂದು ಡೈಲಿ ವೇಜಸ್‌ನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ, ತಾವು ಶಿಫಾರಸ್ಸು ಮಾಡಿ ಎಂದು ಕೇಳಿದರು. ಅದಕ್ಕೆ ನಾನು ಅವರಿಗೆ ಈಗ ಡೈಲಿ ವೇಜಸ್‌ನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲವೆಂದು ಹೇಳಿದೆ. ಅಲ್ಲಿ ಅದೇ ಕೆಲಸ ನಡೆಯುವುದು ಎಂದರು. ಹುಡುಗರು ತಂದ ಅರ್ಜಿಯನ್ನು ಇಟ್ಟುಕೊಂಡು ೪ ಗಂಟೆಗೆ ಮನೆಗೆ ಬನ್ನಿ ಎಂದು ಹೇಳಿದೆ ನಂತರ ಹೇಳದೆ ಕೇಳದೆ ಅವರ ಅಡಿಷನಲ್ ಡೈರೆಕ್ಟರ್ ಜೊತೆಯಲ್ಲಿ ಹೋದೆ. ಅಲ್ಲಿ ನೋಡಿ ನನಗೆ ದಿಗ್ಭ್ರಮೆ ಆಯಿತು. ವರ್ಷಾನುಗಟ್ಟಲೆಯಾದರೂ ಬೇಲ್ ತಂದ್ದದನ್ನು ಓಪನ್ ಮಾಡಿರಲಿಲ್ಲ. ಬಟ್ಟೆ ಎಲ್ಲ ತೂತು ಬಿದ್ದಿತ್ತು. ಯಾವ್ಯಾವ ವರ್ಷದಲ್ಲಿ ತಂದದ್ದು ಎಂಬ ಬಗ್ಗೆ ಲೆಕ್ಕ ಇಲ್ಲ. ಆಡಿಟ್ ರಿಪೋರ್ಟ್ ತರಿಸಿ ನೋಡಿದಾಗ ದಿಗ್ಭ್ರಮೆಯಾಯಿತು. ನೀವೆಲ್ಲ ಏನು ಮಾಡುತ್ತಿದ್ದೀರಿ ಎಂದು ಅಧಿಕಾರಿಗಳನ್ನು ಕೇಳಿದೆ. ಬರೀ ದೋಸೆ, ಇಡ್ಲಿ ತಿಂದು ಮನೆಗೆ ಹೋಗಿದ್ದೀರಿ. ಅಡಿಷನಲ್ ಡೈರೆಕ್ಟರ್ ಏನು ಮಾಡುತ್ತಿದ್ದರು ಎಂದು ಕೇಳಿದೆ. ಎಲ್ಲಾ ಕಂತೆ ತೆಗೆಯಿರಿ ಅಂದಾಗ ನನಗೆ ಅರ್ಥ ವಾಯಿತು, ಏನೆಂದರೆ ಹೀಗೆ ಅಕೌಂಟ್ಸ್ ಮಾನ್ಯುಪುಲೇಟ್ ಮಾಡುತ್ತಿದ್ದಾರೆ ಎಂದು. ನಮ್ಮ ಕರ್ನಾಟಕ ರಾಜ್ಯದಲ್ಲಿ ನೂಲನ್ನು ತೆಗೆದುಕೊಂಡು ಹೊಟ್ಟೆಗಿಲ್ಲದ ನೇಕಾರರಿಗೆ ಕೊಟ್ಟು ಬಟ್ಟೆ ಮಾಡಿಸಿ ಅದನ್ನು ತಂದು ಮಾರಿ ಅವರಿಗೆ ೪ ಕಾಸು ಜಾಸ್ತಿ ಕೊಡಬೇಕೆಂಬುದು ನಮ್ಮ ಉದ್ದೇಶ. ಆದರೆ ಇವರು ೫೦—೬೦ ಪರ್ಸೆಂಟ್ ಕೊಟ್ಟು ತಮಿಳ್ನಾಡು ಮಂತ್ರಿತರ ರಾಜ್ಯಗಳಿಂದ ತಂದು ಮಾರುತ್ತಿದ್ದರು. ದೊಡ್ಡಬಳ್ಳಾಪುರದ ಸಿಲ್ಕ್ ಸೊಸೈಟಿಯಿಂದಲೂ ಕೂಡ ಬಟೆ ಕೊಂಡಿದ್ದಾರೆ. ಈ ರೀತಿ ಮೋಸ ದಗಾ ನಡೆಯುತ್ತಿತ್ತು ಅದನ್ನು ಮಂಟ್ಟುಗೋಲು ಹಾಕಬೇಕೆಂದು ಈ ರೀತಿ ಮಾಡಿದೆವು. ಅಸರಲ್ಲಿ ಒಂದು ಕೋಟಿ ೬೦ ಲಕ್ಷ ರೂಪಾಯಿ ಬಟ್ಟೆ ಏನಿತ್ತು, ಅದರಲ್ಲಿ ೪೦—೫೦ ಪರ್ಸೆಂಟ್ ಉಪಯೋಗಕ್ಕೆ ಬರುವುದಿಲ್ಲ. ೫೦ ಪರ್ಸೆಂಟ್ ಡಿಸ್‌ಕೌಂಟ್ ಕೊಟ್ಟರೂ ಸಹ ೩೦ ಪರ್ಸೆಂಟ್ ಸ್ಟಾಕನ್ನು ಲಿಕ್ವಿಡೇಟ್ ಮಾಡುವುದಕ್ಕೆ ಆಗಲಿಲ್ಲ. ನಬಾರ್ಡ್‌ನಿಂದ ಒಂದು ಕೋಟಿ ರೂಪಾಯಿ ಸಾಲ ಬಂದಿತ್ತು. ಅದು ವಾಪಸ್ಸು ಆಗಲಿಲ್ಲ. ಅವರು ಅಕೌಂಟಿಂಗ್ ಸರಿಯಿಲ್ಲವಾದ್ದರಿಂದ ಸಾಲ ರಿನ್ಯೂ ಮಾಡುವುದಿಲ್ಲವೆಂದರು. ಸ್ಪೆಷಲ್ ಆಫೀಸರನ್ನು ಅಲ್ಲಿಗೆ ಹಾಕಿದ ಮೇಲೆ ೫೧ ಲಕ್ಷ ರೂಪಾಯಿಗಳನ್ನು ತೀರಿಸಿದ್ದಾರೆ, ಇನ್ನೂ ೪೯ ಲಕ್ಷ ರೂಪಾಯಿಗಳನ್ನು ತೀರಿಸಬೇಕಾಗಿದೆ. ಆಫೆಕ್ಸ್ ಬ್ಯಾಂಕಿನಿಂದ ತೆಗೆದುಕೊಂಡ ಸಾಲವನ್ನು ಕಡಿಮೆ ಮಾಡಲಿಕ್ಕೆ ೧೧ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೇಗೋ ಮಾಡುತ್ತಿದ್ದಾರೆ. ೩೫೯ ಜನ ಡೈಲಿ ವೇಜಸ್ ಮೇಲೆ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇದನ್ನೆಲ್ಲ ನೋಡಿದ ಮೇಲೆ ರೂಲ್ ೬೪ರ ಪ್ರಕಾರ ಎನ್‌ಕ್ವೈರಿಗೆ ಆರ್ಡರ್ ಮಾಡಿದೆ. ಆಮೇಲೆ ಹೈಕೋರ್ಟಿನಿಂದ ಸ್ಟೇ ಆರ್ಡರ್ ತಂದರು. ಯಾರು ಸ್ಟೇ ಆರ್ಡರ್ ತಂದಿದ್ದರು, ಅವರೇ ಅದನ್ನು ವಿತ್‌ಡ್ರಾ ಮಾಡಿದ ಮೇಲೆ

ಆಡಳಿತಾಧಿಕಾರಿಯನ್ನು ಹಾಕಿದ್ದೇವೆ. ಈಗ ಏತಕ್ಕೆ ಲಾಸ್ ಆಗುತ್ತಿದೆ ಎಂದು ಕೇಳಿದಕ್ಕೆ ಬಟ್ಟೆ ತಂದದ್ದು, ನಬಾರ್ಡಿಗೆ ಕೊಡತಕ್ಕದ್ದು ಇರುವುದರಿಂದ, ಲಾಸ್ ಆಗುತ್ತಿದೆ ಎಂದು ಹೇಳಿದ್ದಾರೆ. ನೂರು ಜನ ನೌಕರರನ್ನು ಕನ್‌ಸಾಲಿಡೇಟೆಡ್ ಪೇಮೆಂಟ್ ಮೇಲೆ ತೆಗೆದುಕೊಂಡಿದ್ದಾರೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಮಳಿಗೆಯನ್ನು ಓಪನ್ ಮಾಡುವುದಕ್ಕೆ ೧೨ ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದಾರೆ. ಪ್ರತಿಯೊಂದು ಮಳಿಗೆಯಲ್ಲೂ ವ್ಯಾಪಾರ ಇಲ್ಲ. ಫ್ಲಾರ್ಟೇಜಸ್ ಇದೆ. ಈ ರೀತಿ ಎಲ್ಲ ಅವ್ಯವಸ್ಥೆ ಇದುದರಿಂದ ಟೇಕ್ ಓವರ್ ಮಾಡಿದ್ದೇವೆ. ಎರಡು ವರ್ಷದಿಂದ ಲಾಸ್ ಆಗುತ್ತಿದೆ. ಈ ಕಾರಣಗಳನ್ನೆಲ್ಲ ನೋಡಿ ಸರ್ಕಾರದಿಂದ ೫೦ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹತ್ತು ಸಾವಿರ ಸೀರೆ ಏನು ತಯಾರು ಮಾಡುತ್ತಿದ್ದರು, ಅದನ್ನು ೫೦ ಸಾವಿರಕ್ಕೆ ಏರಿಸಿದ್ದೇವೆ. ಒಂದೆರಡು ವರ್ಷ ಲಾಸ್ ಆಗಬಹುದು. ಆದರೂ ನಮ್ಮ ಉದ್ದೇಶ ನೂರಕ್ಕೆ ನೂರರಷ್ಟು ಸಫಲವಾಗಬೇಕಾದರೆ ನಮ್ಮ ಸ್ಪಿನ್ನಿಂಗ್ ಮಿಲ್‌ನಿಂದಲೇ ತರಬೇಕು, ನಮ್ಮವರಿಗೇ ಕೊಡಬೇಕು, ಅವರನ್ನು ನಿಯಂತ್ರಿಸಬೇಕು, ಇವರಿಗೆ ಸಹಾಯ ಮಾಡಬೇಕೆಂದು ಈ ರೀತಿ ಮಾಡಿದ್ದೇವೆ. ಎರಡನೆಯದಾಗಿ ೧೯೭೩ ರಲ್ಲಿ ಸೈಸಿಂಗ್ ಪ್ಲಾಂಟ್ ಸ್ಯಾಂಕ್ಷನ್ ಆದದ್ದು, ಅದು ಕಂಪ್ಲೀಟ್ ಆದದ್ದು ೧೯೮೪ ರಲ್ಲಿ. ಅಲ್ಲಿರತಕ್ಕ ಚಿಕ್ಕ ಮತ್ತು ದೊಡ್ಡ ಬಾಯ್ಲರ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಡೈಹೌ, ಇಲ್ಲ. ಜೊತೆಗೆ ೧೩ ವರ್ಷದಲ್ಲಿ ೧೦ ಸೈಸಿಂಗ್ ಪ್ಲಾಂಟ್ ಬಂದಿದೆ. ಕೆ. ಐ. ಡಿ. ಸಿ. ಯವರು ಒಂದನ್ನು ಹಾಕಿದ್ದಾರೆ. ಎನ್. ಟಿ. ಸಿ. ಯವರನ್ನು ಕೆರೆಸಿ ಇನ್ಸ್‌ಪೆಕ್ಟ್ ಮಾಡಿ ರಿಪೋರ್ಟ್ ಕೊಡಿ ಎಂದು ಹೇಳಿದ್ದೇವೆ. ಕೆ. ಐ. ಡಿ. ಸಿ. ಯವರಿಗೆ ತೆಗೆದುಕೊಂಡು ನಡೆಸಿ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ. ಬಿ. ಕೋಳಿವಾಡ.— ಸಹಕಾರ ಮಂತ್ರಿಗಳು ಸ್ವತಃ ಭೇಟಿಯಿಂದ ಮನಗಂಡು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ, ಒಪ್ಪೋಣ. ಆದರೆ ಆಡಳಿತ ಮಂಡಳಿಯವರಲ್ಲಿ ಅಷ್ಟೇ ದುಷ್ಕರ್ಮ ಇದೆಯೋ ಅಥವಾ ಬೇರೆ ಏನಾದರೂ ಇದೆಯೋ ? ರಾಜ್ಯ ಮಟ್ಟದಲ್ಲಿ ರಿಜಿಸ್ಟ್ರಾರ್, ಜಂಟ್ ರಿಜಿಸ್ಟ್ರಾರ್ ಎಲ್ಲ ಇರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದವರ ಮೇಲೆ ಏನು

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಕ್ರಮ ತೆಗೆದುಕೊಂಡಿದ್ದೀರಿ ? ಆಡಳಿತ ಮಂಡಲಿಯವರನ್ನು ಸೂಪರ್‌ಸೀಡ್ ಮಾಡಿ ಮನೆಗೆ ಕಳುಹಿಸಿದ್ದಿರಿ. ಒಪ್ಪೋಣ. ಆದರೆ ಸರ್ಕಾರಿ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಏನೂ ತೆಗೆದುಕೊಂಡಿಲ್ಲ ಎಂಬುದು ನನ್ನ ತಿಳಿವಳಿಕೆ ಏತಕ್ಕೆ ತೆಗೆದುಕೊಂಡಿಲ್ಲ ? ಇನ್ನೊಂದು, ಈ ಸಂಘದ ಬೈಲಾ ತಿದ್ದುಪಡಿ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೀರಿ ಎಂದು ಕೇಳಿದ್ದೇನೆ. ಜನರಲ್ ಬಾಡಿಯವರು ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿ ರೆಸಲ್ಯೂಷನ್ ಮಾಡಿದ್ದಾರೆಂದು ಕೇಳಿದ್ದೇನೆ ಎಲ್ಲಿ ಸದಸ್ಯರು ಹೆಚ್ಚು ಇರುತ್ತಾರೋ ಅಲ್ಲಿ ಹೆಚ್ಚು ಪ್ರಾತಿನಿಧ್ಯ ಕೊಡತಕ್ಕದ್ದು ಸರಿ ಎಂಬುದು ನನ್ನ ಪ್ರಾಮಾಣಿಕ ಅಭಿಪ್ರಾಯ. ಎಲ್ಲಿ ಸದಸ್ಯರು ಹೆಚ್ಚು ಇಲ್ಲ ಅಲ್ಲಿ ಪ್ರಾತಿನಿಧ್ಯ ಕೊಡತಕ್ಕದ್ದು ಸರಿಯಲ್ಲವೆಂದು ಹೇಳಂತ್ತೇನೆ. ಮುಖ್ಯವಾಗಿ ಸರ್ಕಾರಿ ಅಧಿಕಾರಿಗಳ ಮೇಲೆ ಯಾವ ಕ್ರಮ ಹಾಕಿಕೊಂಡಿದ್ದೀರಿ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ.— ಸೆಕ್ಷನ್ ೬೪ರ ಪ್ರಕಾರ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇನೆ. ಎನ್‌ಕ್ವೈರಿ ಆಗುತ್ತಿದೆ. ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಯಾರ ಯಾರ ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಒಂದು ಹೇಳಬೇಕು. ಯಾರು ಈ ತರಹ ದುರುಪಯೋಗ ಮಾಡಿ ಸ್ವಾರ್ಥಕ್ಕೆ ದುರುಪಯೋಗ ಮಾಡಿಕೊಳ್ಳುತ್ತಿದ್ದರು, ಅವರನ್ನು ಇಲ್ಲಿ ತಪ್ಪಿಸಿ ಕಳುಹಿಸಿದ ಮೇಲೆ ಅವರು ಇನ್ನೊಂದು ಕಡೆ ಇದೇರೀತಿ ಮಾಡುತ್ತಿದ್ದಾರೆ. ೨೦ ಲಕ್ಷ ರೂಪಾಯಿಗಳನ್ನು ರಿಬೇಟ್‌ನಲ್ಲಿ ದುರುಪಯೋಗ ಮಾಡಿದ್ದಾರೆ ಅದನ್ನು ಹಿಡಿದಿದ್ದೇನೆ. ಇಂಥವರನ್ನು ಆರು ತಿಂಗಳು ಒಳಗಡೆ ಬಿಡುವುದಕ್ಕೆ ವ್ಯವಸ್ಥೆ ಮಾಡದೇಹೋದರೆ ಬಹಳ ಕಷ್ಟ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ನಾನ್‌ಆಫಿಷಿಯಲ್ ಬಾಡಿಯನ್ನು ಸೂಪರ್‌ಸೀಡ್ ಮಾಡಿ ಅಧಿಕಾರಿಗಳಿಗೆ ಪ್ರೊಮೋಷನ್ ಕೊಡುವುದು ಸರಿಯಲ್ಲ. ನಾನು ಬಂದ ತಕ್ಷಣ ಹೇಳಿದೆ, ಎಲ್ಲಾದರೂ ಏನಾದರೂ ಈ ತರಹ ಆದರೆ ಗೌರ್ನಮೆಂಟ್

ನಾಮಿನಿಯಾಗಿ ಯಾರು ಅಧಿಕಾರಿಗಳಿರುತ್ತಾರೆ, ಅವರೇ ರೆಸ್ಪಾನ್ಸಿಬಲ್ ಎಂದು ಹೇಳಿದ್ದೇನೆ. ಸರ್ಕ್ಯುಲರ್ ಇಷ್ಯೂ ಮಾಡಿದ್ದೇನೆ. ಅದರಂತೆ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಬೈಲಾ ತಿದ್ದುಪಡಿ ಬಗ್ಗೆ ಹೇಳಿದ್ದಾರೆ. ನಾವು ಕೆಲವರನ್ನು ಎಲಿಮಿನೇಟ್ ಮಾಡುವುದಕ್ಕೆ ಯೋಚನೆ ಮಾಡಿದ್ದೇವೆ. ಏಕೆಂದರೆ ಅವರ ಸಂಬಂಧ ಏನೂ ಇಲ್ಲ. ಸಮ್ಮನೆ ಅಪೆಕ್ಸ್ ಇನ್‌ಸ್ಟಿಟ್ಯೂಷನ್ ನಿಂದ ಟಿ. ಎ. ಡಿ. ಎ. ತೆಗೆದುಕೊಂಡು ಹೋಗುವುದು ಮಾಡುತ್ತಾರೆ. ವ್ಯಾಪಾರ ಇಲ್ಲ. ಏನೂ ಇಲ್ಲ. ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಕೆಲಸ ? ಆದ್ದರಿಂದ ಕೆಲವರನ್ನು ಎಲಿಮಿನೇಟ್ ಮಾಡುವುದಕ್ಕೆ ಬೈಲಾ ತಿದ್ದುಪಡಿಯನ್ನು ರಿ—ಗೆ ತಂದು ಇದನ್ನು ಕ್ಲೀನ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನೂ ಕ್ಲೀನ್ ಆಗಿಲ್ಲ. ಅದಕ್ಕೆ ಸಮಯ ಬೇಕು, ನಾನ್—ಆಫಿಷಿಯಲ್ಸ್ ಸರಿ ಇಲ್ಲದಿದ್ದರೆ ಬಹಳ ಕಷ್ಟ. ನಾನು ಪಡಬಾರದ ಹಿಂಸೆ ಪಡುತ್ತಿದ್ದೇನೆ. ಆದ್ದರಿಂದ ಬೈಲಾ ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್ — ನಾನು ಈ ಬಗ್ಗೆ ವಿಶೇಷವಾಗಿ ಏನೂ ಹೇಳುವುದಿಲ್ಲ. ಏಕೆಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಮಂತ್ರಿಗಳು ಹೇಳಿದ್ದರ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ಮಾತನಾಡುತ್ತೇನೆ. ಅದು ಕೆಟ್ಟ ಸೊಸೈಟಿ ಇದ್ದರೆ ಕ್ರಮ ತೆಗೆದುಕೊಳ್ಳಿ. ಆದರೆ ಸಹಕಾರ ಸಚಿವರಾದ ತಮಗೆ ನಾನ್ ಆಫಿಷಿಯಲ್ಸ್ ಮೇಲೆ ಅವಿಶ್ವಾಸ ಮೂಡಬಾರದು, ಸಮಾಜದಲ್ಲಿ ಕಳ್ಳರು ಇಲ್ಲದೇ ಇರುತ್ತಾರಾ ? ಅದೇರೀತಿ ಸಹಕಾರ ಕ್ಷೇತ್ರದಲ್ಲಿ ಯಾರಾದರೂ ಕಳುವು ಮಾಡಿದರೆ ಇಡೀ ನಾನ್ ಆಫಿಷಿಯಲ್ಸ್ ಮೇಲೆ ತಮಗೆ ಅವಿಶ್ವಾಸ ಬರುವುದು ಬೇಡ. ಬೈಲಾ ತಿದ್ದುಪಡಿ ಮಾಡುವುದನ್ನು ಅಧಿಕಾರಿಗಳಿಂದ ತಪ್ಪಿಸಿ. ನೀವು ಇಲ್ಲಿಂದ ಡೈರೆಕ್ಷನ್ ಕೊಡಿ. ಅವರು ಮಾಡುವುದಿಲ್ಲ ಎಂದು ಹೇಳಿದಾಗ ನೀವು ಮಾಡಿ ಇಪತ್ತು ಏನಾಗುತ್ತಿದೆ ಎಂದರೆ, ನಾನು ಒಂದು ಸೊಸೈಟಿ ಛೇರ್ಮನ್ ಎಂದು ತಿಳಿದುಕೊಳ್ಳಿ. ನಮ್ಮ ಊರಿನಿಂದ ಇಲ್ಲಿಗೆ ಸೊಸೈಟಿ ಕೆಲಸಕ್ಕೋ ಮಿನಿಸ್ಟರ್ ಭೇಟಿ ಮಾಡುವುದಕ್ಕೋ ಬರುತ್ತೇನೆ. ನಾನು ಭತ್ಯ ತೆಗೆದುಕೊಳ್ಳುವುದಿಲ್ಲ. ಆದರೆ ಸೆಕ್ಷನ್ ೧೩ರ ಕೆಳಗೆ ಅಲ್ಲಿಂದ ಇಲ್ಲಿಗೆ ಬರಬೇಕಾದರೆ ಡೆಪ್ಯುಟಿ ರಿಜಿಸ್ಟ್ರಾರ್ ಪರ್ಮಿಷನ್ ತೆಗೆದುಕೊಂಡು ಬರಬೇಕು. ಆ ರೀತಿ ಆರ್ಡರ್ ಕೊಟ್ಟಿದ್ದಾರೆ. ಸರ್ಕಾರಿಗಳು ಎಂದರೆ ಅವರೇನು ಕಳ್ಳರಾ ? ಎಲ್ಲ ಸಹಕಾರಿಗಳ ಬಗ್ಗೆ, ಅವರ ಕೆಲಸದ ಬಗ್ಗೆ ಸಂಶಯ ಪಡುವುದು ಬೇಡ. ಕಳ್ಳರನ್ನು ಹಿಡಿದು ಹಾಕಿ. ಬಲಿ ಹಾಕಿ.

ಶ್ರೀ ಆರ್. ಎಲ್. ಜಾಲಪ್ಪ — ನಾನು ವಿಧಾನಸೌಧಕ್ಕೆ ಬರುವಾಗ ಸುತ್ತಲೂ ಕಾರುಗಳೇ ನಿಂತಿರುತ್ತವೆ. ಷುಗರ್ ಫ್ಯಾಕ್ಟರಿ ಕಾರುಗಳು, ಸ್ಪಿನ್ನಿಂಗ್ ಮಿಲ್ಸ್ ಕಾರುಗಳು ಇರುತ್ತವೆ. ಅವರು ಬರಬೇಕಾದರೆ ಬಸ್ಸಿನಲ್ಲಿ ಬರುವುದಕ್ಕಾಗುವುದಿಲ್ಲವಾ ? ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡು ಬರುತ್ತಾರೆ. ಜಿಲ್ಲಾ ಬ್ಯಾಂಕಿನಿಂದ ಟಿ. ಎ. ಕ್ಲೈಮ್ ಮಾಡಿಕೊಂಡು ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡು ಬರುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್.— ನಿಮ್ಮ ಚೀಫ್ ಸೆಕ್ರೆಟರಿ ಡೆಲ್ಲಿಗೆ ಹೋದರೆ ಥರ್ಡ್‌ಕ್ಲಾಸ್‌ನಲ್ಲಿ ಹೋಗಿಬರುತ್ತಾರಾ ? ಅಶೋಕ ಹೋಟೆಲ್‌ನಲ್ಲಿ ಇಳಿದುಕೊಳ್ಳುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.— ಲಾಭ ಸಂಪಾದನೆ ಮಾಡಿ ಖರ್ಚು ಮಾಡಲಿ. ನಾನು ಅಡ್ಡ ಬರುವುದಿಲ್ಲ. ಲಾಭ ಸಂಪಾದನೆ ಮಾಡದೆ.....

ಶ್ರೀ ಕೆ. ಎಚ್. ಪಾಟೀಲ್.— ಹಣಕಾಸಿನ ರಿಸ್ಟ್ರಿಕ್ಷನ್ ಇದ್ದರೆ ಆಭ್ಯಂತರ ಇಲ್ಲ. ಆದರೆ ಅಧಿಕಾರಿಗಳಿಂದ ಅಧಿಕಾರೇತರರಿಗೆ ಆಗತಕ್ಕ ನ್ಯೂನತೆಗಳು ತಪ್ಪಬೇಕು.

ಶ್ರೀ ಆರ್. ಎಲ್. ಜಾಲಪ್ಪ —ಇವತ್ತು ನಾನು ಏನೇನು ಆದೇಶಗಳನ್ನು ಕೊಟ್ಟಿದ್ದೇನೋ, ಅವುಗಳನ್ನೆಲ್ಲಾ ನಾನೇ ಕೊಟ್ಟರಿಂತಹದ್ದು. ಅಧಿಕಾರಿಗಳಿಂದ ಬಂದದ್ದಲ್ಲ. ನಾನು ಈ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ತೆಗೆದುಕೊಂಡಿರುವಂತಹ ಕಾರ್ಯ ಕ್ರಮದಲ್ಲಿ ಪಾರ್ಟಿ ಪಕ್ಷ ಎಂಬುದನ್ನು ನೋಡಿಕೊಂಡು ಮಾಡಿಲ್ಲ. ನಿಮಗೊಂದು ರೀತಿಯಲ್ಲಿ ನಮ್ಮವರಿಗೊಂದು ರೀತಿಯಲ್ಲಿ ಮಾಡಿಲ್ಲ. ನಿಮಗೆ ಹೇಳಬೇಕಾದರೆ, ನನ್ನ ಇಲಾಖೆಯ ಬೇಡಿಕೆ ಬಂದಾಗ ಅದರ ಬಗ್ಗೆ ವಿವರಗಳನ್ನು ಹೇಳುತ್ತೇನೆ. ಇಲ್ಲಿಯವರೆಗೆ ನಮ್ಮವರ ಮೇಲೂ ಸಹ ಎಷ್ಟು ಕ್ರಿಮಿನಲ್ ಕೇಸುಗಳನ್ನು ಹಾಕಿಸಿದ್ದೇನೆಂದು ಬೇಕಾದರೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಪರಿಣಿತರಾಗಿರತಕ್ಕ ತಮ್ಮ ಕೈಗೆ ಅಧಿಕಾರ ಬಂದು ೪ ವರ್ಷಗಳಾಯಿತು. ಈ ಖಾತೆಯನ್ನು ತಾವು ತೆಗೆದು ಕೊಂಡು ೪ ವರ್ಷಗಳಾಯಿತು. ಬೇರೆಯವರದ್ದೆಲ್ಲಾ ಬದಲಾವಣೆಯಾಯಿತು. ಆದರೆ ನಿಮ್ಮ ಖಾತೆ ಮಾತ್ರ ಬದಲಾವಣೆಯಾಗಲಿಲ್ಲ. ಸರಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಮುಖ್ಯ ಮಂತ್ರಿಗಳಿಗೆ ಗೊತ್ತಿದ್ದಿರಬಹುದು. ಇಷ್ಟಾಗಿದ್ದರೂ ಈ ಇಲಾಖೆಯಲ್ಲಿ ಸುಧಾರಣೆ ಬರುತ್ತಿಲ್ಲವಲ್ಲ ಇದಕ್ಕೆ ಕಾರಣ ವೇನು?

ಶ್ರೀ ಆರ್. ಎಲ್. ಜಾಲಪ್ಪ.—ಅದು ಬಹುಶಃ ನನ್ನ ಇನ್‌ಎಸಿಫಿಯನ್ಸಿ ಕಾರಣ ಇರಬಹುದು. ಕೆಟ್ಟು ಹೋಗಿರುವುದನ್ನೂ ಮತ್ತು ಸಂಪೂರ್ಣವಾಗಿ ಜಿಡ್ಡು ಹಿಡಿದಿರುವುದನ್ನು ಪೂರ್ತಿ ಸುಧಾರಣೆ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೂ ನನ್ನ ಕೈಲಾದುದನ್ನು ಮಾಡಿದ್ದೇನೆ. ಜನಕ್ಕೆ ಈ ಇಲಾಖೆ ಇದೆ ಅಂತಲೇ ಗೊತ್ತಿರಲಿಲ್ಲ. ಆದರೂ ಸಹಕಾರಿ ಇಲಾಖೆಯೊಂದು ಇದೆ ಎಂಬುದನ್ನು ಜನರಿಗೆ ತೋರಿಸಿಕೊಟ್ಟಿದ್ದೇನೆ. ನೂರಾರು ಅಧಿಕಾರೇತರರ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಂಡಿದ್ದೇನೆ. ಮೊನ್ನೆ ಕೂಡ ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಂವುದಕ್ಕೆ ಆರ್ಡರ್ ಮಾಡಿ ಕಳುಹಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಾಗಿಯೇ ನಾನಂ ಹೇಳುವುದೇನೆಂದರೆ, ಅಧಿಕಾರಿಗಳದ್ದು ಒಂದು ಕಡೆ ಇರಲಿ. ಆದರೆ ಅಧಿಕಾರೇತರರು ಯಾರ್ಯಾರು ಈ ರೀತಿ ಮಾಡಿದ್ದಾರೆ, ಅವರು ಅಧ್ಯಕ್ಷರು ಇರಬಹುದು, ಉಪಾಧ್ಯಕ್ಷರು ಇರಬಹುದು, ಅವರನ್ನೆಲ್ಲಾ ನೇಣು ಹಾಕಿದರೆ ಆಗ ಸರಿ ಹೋಗುತ್ತದೆ. ಆದರೆ ಅದನ್ನು ಬಿಟ್ಟು ಅಂತಹವರನ್ನು ಪ್ರೊಟೆಕ್ಷನ್ ಮಾಡುತ್ತಾ ಹೋದರೆ ಇದಂ ಸರಿ ಹೋಗುವುದಿಲ್ಲ. ಈ ರೀತಿಯಂ ಸಹಕಾರಿಗಳದ್ದೇ ಒಂದು ಜಾತಿ. ಅವರಿಗೆ ಪಾರ್ಟಿ ಪಕ್ಷ ಯಾವುದೂ ಇಲ್ಲ. ನೀವು ಅಂತಹವರ ವಿರುದ್ಧವಾಗಿ ಕೆಲಸ ಮಾಡಿದ್ದೇ ಆದರೆ ನಾವು ನಿಮಗೆ ಶೆಹಭಾಸ್‌ಗಿರಿ ಕೊಡುವಂತಹವರಂ.

ಶ್ರೀ ಆರ್. ವೆಂಕಟರಾಮಯ್ಯ.—ದುರುಪಯೋಗ ಮಾಡಿದಂತಹ ಸೆಕ್ರೆಟರಿಯಂ ಮೇಲೆ ಕೇಸನ್ನು ಹಾಕಬೇಕೆಂದರೊ ಕೇಸನ್ನೇ ಹಾಕುತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅಂತಹ ನೂರಾರು ಕೇಸುಗಳನ್ನು ಹಾಕಿದ್ದೇನೆ. ಅಂತಹವರ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಿದರೆ, ಅವರ ಪರವಾಗಿ ವಾದ ಮಾಡುವುದಕ್ಕೆ ನಿಮ್ಮಂತಹವರಂ ಕೋರ್ಟಿಗೆ ಹೋಗಿ, ಅವರನ್ನು ಬಿಡಿಸುತ್ತಾರೆ.

ಕಡೂರು ತಾಲ್ಲೂಕಿನಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯುವುದು

೭೪೦ (ಅ) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೆ?

ಅ) ಕಡೂರು ತಾಲ್ಲೂಕಿನಲ್ಲಿ ಸುಮಾರು ೧೮ ಪ್ರೌಢ ಶಾಲೆಗಳು, ೪ ಸರ್ಕಾರಿ ಕಿರಿಯ ಕಾಲೇಜಂ ೨ ಖಾಸಗಿ ಕಿರಿಯ ಕಾಲೇಜಂ ಇದ್ದು ಬಹಳ ಕಡೆ ವಿದ್ಯಾರ್ಥಿ ನಿಲಯಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೧೯೮೭-೮೮ನೇ ಸಾಲಿನಲ್ಲಿಯಾದರೂ ಪ್ರೌಢ ಶಾಲೆಗಳಿರುವ ಕಡೆ ವಿದ್ಯಾರ್ಥಿನಿಲಯಗಳನ್ನು ಸಾ ಪನೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಕಡೂರು ತಾಲ್ಲೂಕಿನ, ಹಿರೇನಲ್ಲೂರಿಗೆ ಒಂದು ಹೆಣ್ಣು ಮಕ್ಕಳ ಮೆಟ್ರಿಕ್ ಪೂರ್ವನಿಲಯ, ತರಿಕೆರೆ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಗಂಡು ಮಕ್ಕಳ ಮೆಟ್ರಿಕ್ ನಂತರದ ನಿಲಯಂಗಳನ್ನು ಮಂಜೂರು ಮಾಡಿ ೧೯೮೭-೮೮ನೇ ಸಾಲಿನಿಂದ ನಡೆಸಲು ವಿಷಯಂ ಪರಿಶೀಲನೆಯಲ್ಲಿದೆ.